ಅ) ಬಸ್ ರಾಷ್ಟ್ರೀಕರಣವಾದ ಜಾಗದಲ್ಲಿ ಕೆಎಸ್ಆರ್‌ಟಿಸಿ ಬಸ್ಸುಗಳ ಸಮರ್ಪಕ ಒಡಾಟ ಹಾಗೂ ನಿರ್ವಹಣೆ ಇಲ್ಲವೆಂದು ಮನಗಂಡಲ್ಲಿ ಸರ್ಕಾರ ಸಾರ್ವಜನಿಕ ಹಿತಾಸಕ್ತಿಯನ್ನು ಕಾಪಾಡಲು ಖಾಸಗಿ ಬಸ್ ಓಡಾಟಕ್ಕೆ ಅನುಮತಿ ನೀಡುವುದೇ;

ಆ) ನೀಡುವುದಾದಲ್ಲಿ ಈ ನಿಟ್ಟಿನಲ್ಲಿ ಸರ್ಕಾರವು ಯಾವ ಕಾರ್ಯಕ್ರಮ ಕೈಗೊಂಡಿರುತ್ತದೆ;

ಇ) ಇಲ್ಲವಾದಲ್ಲಿ ಮುಂದಾದರೂ ಈ ಬಗ್ಗೆ ವ್ಯವಸ್ಥೆ ರೂಪಿಸಲು ಮಾಡುವ ಇರಾದೆ ಸರ್ಕಾರಕ್ಕಿದೆಯೇ?

ಶ್ರೀ ಪಿ.ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು):

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಇಲ್ಲ.

ಟೂರಿಸ್ಟ್ ಪರ್ಮಿಟ್ ಕುರಿತು

588 (957) ಶ್ರೀ ಡಿ.ವಿ. ಸದಾನಂದಗೌಡ, (ಪುತ್ತೂರು): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇರಳ ಸರ್ಕಾರದ ಮಾದರಿಯಲ್ಲಿ ಜೀಪುಗಳಿಗೆ ಟೂರಿಸ್ಟ್ ಪರ್ಮಿಟ್ ಕೊಡುವ ಆಲೋಚನೆ ಸರ್ಕಾರಕ್ಕೆ ಇದೆಯೇ;

ಆ) ಈ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಪಿ.ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು):

ಅ) ರಾಜ್ಯದಲ್ಲಿ ಜೀಪುಗಳಿಗೆ ಟೂರಿಸ್ಟ್ ಪರವಾನಿಗೆಗಳನ್ನು ನೀಡಲಾಗುತ್ತಿದೆ.

ಆ) ಉದ್ಭವಿಸುವುದಿಲ್ಲ.

ದ. ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಕೃಷಿ ಉತ್ಪನ್ನ ಮಾರುಕಟ್ಟೆಯ ಸ್ಥಳಾಂತರ

589 (517) ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು): ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರು ತಾಲ್ಲೂಕು ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣ ಕಾರ್ಯ ನಿರ್ವಹಿಸಲು ಯಾವಾಗ ಪ್ರಾರಂಭಿಸುವುದು;

ಆ) ಈ ಪ್ರಾಂಗಣಕ್ಕೆ ವ್ಯಾಪಾರವನ್ನು ಸ್ಥಳಾಂತರಿಸಲು ಕಾರಣವೇನು;

ಇ) ಜನವರಿ ಕೊನೆಯ ಹಂತದಲ್ಲಿ ಖಂಡಿತ ಸ್ಥಳಾಂತರಿಸುವ ಭರವಸೆ ಇನ್ನೂ ಕಾರ್ಯಗತವಾಗದಿರಲು ಕಾರಣಗಳೇನು?

ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು):

ಅ) ಮಾರ್ಚ್ 97 ರಲ್ಲಿ ಪ್ರಾರಂಭಿಸಲು ಉದ್ದೇಶಿಸಲಾಗಿದೆ.

ಆ) ದಿನಾಂಕ 5.11.96 ರಲ್ಲಿ ವರ್ತಕರು ಅಧಿಕ ಹುಟ್ಟುವಳಿಯಲ್ಲಿ ವ್ಯವಹರಿಸುವ ಎಲ್ಲಾ ವರ್ತಕರಿಗೆ ಅಂಗಡಿ-ವ-ಗೋದಾಮುಗಳನ್ನು ಒದಗಿಸಲು ಮತ್ತು ಪ್ರಾಂಗಣದಲ್ಲಿನ ರೈತ ಭವನ ದುರಸ್ತಿ ಹಾಗೂ ಹೊಸ ಶೌಚಲಾಯ ನಿರ್ಮಿಸಿದ ನಂತರ ವ್ಯಾಪಾರ ಸ್ಥಳಾಂತರಿಸಲು ಕೋರಿರುತ್ತಾರೆ. ಇವನ್ನು ಫೆಬ್ರವರಿ 97 ಅಂತ್ಯದೊಳಗೆ ಮುಗಿಸಲು ಕ್ರಮ ಜರುಗಿಸಲಾಗುತ್ತಿದೆ.

ಇ) ಪ್ರಾಂಗಣಕ್ಕೆ ವ್ಯಾಪಾರವನ್ನು ಸ್ಥಳಾಂತರಿಸುವ ರಾಜ್ಯ ಅರ್ಜಿ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ ಅರ್ಜಿ 39329:95 ದಿನಾಂಕ 12.8.96 ರಂದು ವಜಾ ಆಗಿರುತ್ತದೆ. ಪುತ್ತೂರು ಅಡಿಕೆ ವರ್ತಕರರು ಸಂಘ ಮತ್ತು ಇತರರು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಮತ್ತೊಂದು ರಿಟ್ ಅರ್ಜಿ ಸಂಖ್ಯೆ 711:97 ದಿನಾಂಕ 22.1.97 ರಲ್ಲಿ ದಾಖಲಿಸಿದ್ದಾರೆ ಈ ಅರ್ಜಿ ಇತ್ಯರ್ಥಕ್ಕಾಗಿ ಕ್ರಮ ಕೈಗೊಳ್ಳಲಾಗುತ್ತಿದೆ, ಇದು ಆದ ಕೂಡಲೇ ಸ್ಥಳಾಂತರಿಸುವ ಕ್ರಮ ಜರುಗಿಸಲಾವುದು.

ಸ್ಟಾಂಪ್ ಡ್ಯೂಟಿ ಮನ್ನ ಮಾಡುವ ಬಗ್ಗೆ

591 (207) ಶ್ರೀ ಹೆಚ್. ಶಿವಪ್ಪ (ಹರಿಹರ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅವಿಭಕ್ತ ಹಿಂದೂ ಕುಟುಂಬದ ಸದಸ್ಯರಿಗೆ ಸಂಬಂಧಿಸಿದಂತೆ ಮೌಖಿಕ ವಿಭಾಗ ಪತ್ರಗಳಿಗೆ (ಜುಬಾನೆ ಹಿಸ್ಸೆ) ಮುದ್ರಾಂಕ ಶುಲ್ಕ ಮನ್ನಾ ಮಾಡುವ ಪ್ರಸ್ತಾವನೆ ಏನಾದರೂ ಇದೆಯೇ?

ಶ್ರೀ ರಮೇಶ್ ಸಿ ಜಿಗಜಿಣಗಿ (ಕಂದಾಯ ಸಚಿವರು):

ಅ) ಕರ್ನಾಟಕ ಮುದ್ರಾಂಕ ಅಧಿನಿಯಮ 1957 ರ ಮುದ್ರಾಂಕ ಶುಲ್ಕದ ಅನುಸೂಚಿಯ ಅನುಚ್ಛೇದ-39 ರ ಪ್ರಕಾರ "ಲಿಖಿತ ಪತ್ರಗಳಿಗೆ" ಮಾತ್ರ ಮುದ್ರಾಂಕ ಶುಲ್ಕ ವಿಧಿಸಲಾಗುತ್ತದೆ ಲಿಖಿತ ಪತ್ರವೇ ಇಲ್ಲದಿದ್ದಲ್ಲಿ ಮುದ್ರಾಂಕ ಶುಲ್ಕದ ಅಕರಣೆ ಪ್ರಶ್ನೆ ಉದ್ಭವಿಸುವುದಿಲ್ಲ. ಆದ್ದರಿಂದ ಜುಬಾನೆ ವಿಭಾಗಕ್ಕೆ ಮುದ್ರಾಂಕ ಶುಲ್ಕ ವಿಧಿಸಬೇಕಾಗಿರುವುದಿಲ್ಲ.

ಸಹಕಾರ ಇಲಾಖೆಯ ಆಯವ್ಯಯ

593 (892) ಶ್ರೀ ಹೆಚ್. ಶಿವಪ್ಪ (ಹರಿಹರ): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಹಕಾರ ಇಲಾಖೆಗೆ 1995-96ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿದ ಅವಕಾಶವನ್ನು ವೆಚ್ಚ ಮಾಡಲಾಗಿದೆಯೇ;